ನ-72 (142) (5)

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಪುಟ್ಟಣ್ಣ ರವರು ನಿಯಮ 72ರ ಮೇರೆಗೆ ನೀಡಿರುವ ಗಮನ ಸೆಳೆಯುವ ಸೂಚನಾ ಪತ್ರಕ್ಕೆ ಸಂಬಂಧಿಸಿದಂತೆ ಉತ್ತರ.

*********

ವಿಷಯ:

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ಶಾಲಾ ಕಾಲೇಜುಗಳಲ್ಲಿ ಹಲವಾರು ವರ್ಷಗಳಿಂದ ಹೊರಗುತ್ತಿಗೆ ಆಧಾರದ ಮೇಲೆ ಸಾವಿರಾರು ಬೋಧಕ-ಬೋಧಕೇತರ ಸಿಬ್ಬಂದಿಯವರು ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಇವರು ವಿದ್ಯಾರ್ಥಿಗಳಿಗೆ ಉತ್ತಮ ಶಿಕ್ಷಣ ನೀಡುವಲ್ಲಿ ತುಂಬಾ ಶ್ರಮವಹಿಸಿ ಕೆಲಸ ಮಾಡುತ್ತಿದ್ದಾರೆ. ಹಲವಾರು ವರ್ಷಗಳಿಂದ ಕರ್ತವ್ಯ ನಿರ್ವಹಿಸುತ್ತಿರುವ ಇವರು ಈಗಾಗಲೇ ವಯೋಮಿತಿ ಮೀರಿದ್ದು, ಬೇರೆ ಸರ್ಕಾರಿ ನೌಕರಿಗೆ ಸೇರಲು ಸಾಧ್ಯವಾಗುವುದಿಲ್ಲ. ಆದ್ದರಿಂದ ಪಾಲಿಕೆ ವ್ಯಾಪ್ತಿಯ ಶಾಲಾ ಕಾಲೇಜುಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಈ ಬೋಧಕ / ಬೋಧಕೇತರ ಸಿಬ್ಬಂದಿಯನ್ನು ಪಾಲಿಕೆ ವ್ಯಾಪ್ತಿಯ ಶಾಲಾ/ಕಾಲೇಜುಗಳಲ್ಲಿ ಖಾಯಂಗೊಳಿಸಬೇಕೆಂಬ ವಿಷಯವನ್ನು ಮಾನ್ಯ ಮುಖ್ಯಮಂತ್ರಿಗಳು ಗಮನ ಸೆಳೆಯ ಬಯಸುತ್ತೇನೆ.

ಉತ್ತರ:-

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಒಟ್ಟು 161 ಶಾಲಾ/ಕಾಲೇಜುಗಳು ಕಾರ್ಯನಿರ್ವಹಿಸುತ್ತಿವೆ. ಸದರಿ ಶಾಲಾ/ಕಾಲೇಜುಗಳಿಗೆ ಪ್ರತಿ ವರ್ಷವೂ ಅವಶ್ಯಗನುಗುಣವಾಗಿ ಶಿಕ್ಷಕರು / ಉಪನ್ಯಾಸಕರುಗಳನ್ನು ಹೊರಗುತ್ತಿಗೆ ಆಧಾರದಲ್ಲಿ ಏಜೆನ್ಸಿ ಮುಖಾಂತರ ಜೂನ್‌ನಿಂದ ಏಪ್ರಿಲ್ ತಿಂಗಳವರೆಗೆ ಒಟ್ಟು 11 ತಿಂಗಳವರೆಗೆ ನೇಮಕ ಮಾಡಿಕೊಳ್ಳಲಾಗುತ್ತಿದ್ದು, ಶಿಕ್ಷಕರ/ಉಪನ್ಯಾಸಕರುಗಳಿಗೆ ಈ ಕೆಳಕಂಡ ಪಟ್ಟಿಯಲ್ಲಿ ತಿಳಿಸಿರುವಂತೆ ವೇತನವನ್ನು ನೀಡಲಾಗುತ್ತಿದೆ.

| ಕ್ರ ಸಂ. | ಶಾಲಾ/ಕಾಲೇಜಿನ ಹೆಸರು | ಹೊರಗುತ್ತಿಗೆ ಶಿಕ್ಷಕರು / ಉಪನ್ಯಾಸಕರುಗಳ ಒಟ್ಟು ಸಂಖ್ಯೆ | ಒಂದು ತಿಂಗಳಿಗೆ ಪಡೆಯುತ್ತಿರುವ ವೇತನ |
|---|---|---|---|
| 1. | ಶಿಶುವಿಹಾರ | 80 | 19366 +ESI/PF |
| 2. | ಪ್ರಾಥಮಿಕ ಶಾಲೆ | 73 | 19366 +ESI/PF |
| 3. | ಪ್ರೌಢಶಾಲೆ | 244 | 22860 +ESI/PF |
| 4. | ಪದವಿ ಪೂರ್ವ ಕಾಲೇಜು | 123 | 25697 +ESI/PF |
| 5. | ಪದವಿ ಕಾಲೇಜು | 57 | 27897 +ESI/PF |
| 6. | ಸ್ನಾತಕೋತ್ತರ ಪದವಿ ಕಾಲೇಜು | 07 | 30897 +ESI/PF |
| 7. | ಕಂಪ್ಯೂಟರ್ | 31 | 22053 +ESI/PF |
| ಒಟ್ಟು | | **615** | |

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಕೌನ್ಸಿಲ್ ಸಭೆಯ ತೀರ್ಮಾನದ ವಿಷಯ ಸಂಖ್ಯೆ: 26(210)/2016-17, ದಿನಾಂಕ:09-08-2016ರಲ್ಲಿ ಕೈಗೊಂಡಿರುವ ನಿರ್ಣಯದಂತೆ ನೇಮಕಾತಿ ಸಮಯದಲ್ಲಿ ಹೊರಗುತ್ತಿಗೆ ಶಿಕ್ಷಕರುಗಳಿಗೆ ಆದ್ಯತೆ ನೀಡುವ ಬಗ್ಗೆ ಸರ್ಕಾರದ ಆದೇಶಗಳ ಉಲ್ಲಂಘನೆಯಾಗದಂತೆ ವಿಶೇಷ ನಿಯಮಾವಳಿಗಳನ್ನು ರಚಿಸಲು ಆಯುಕ್ತರು, ಬಿಬಿಎಂಪಿ ರವರು ಸರ್ಕಾರಕ್ಕೆ ದಿನಾಂಕ: 29-06-2017 ರಲ್ಲಿ ಪ್ರಸ್ತಾವನೆಯನ್ನು ಸಲ್ಲಿಸಿದ್ದರು.

.2...

ಸದರಿ ಪ್ರಸ್ತಾವನೆಯನ್ನು ಸರ್ಕಾರವು ಪರಿಶೀಲಿಸಿ ಆದೇಶ ಸಂಖ್ಯೆ: ನಅಇ 33 ಎಂಎನ್‌ಜಿ 2017, ದಿನಾಂಕ: 07-09-2017ರಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಕೌನ್ಸಿಲ್ ಸಭೆಯ ತೀರ್ಮಾನದ ವಿಷಯ ಸಂಖ್ಯೆ: 26(210)/2016-17, ದಿ: 09-08-2016 ರಲ್ಲಿ ಕೈಗೊಂಡಿರುವ ನಿರ್ಣಯದಂತೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಶಾಲೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಹೊರಗುತ್ತಿಗೆ ಶಿಕ್ಷಕರ ನೇಮಕಾತಿಯು ಚಾಲ್ತಿಯಲ್ಲಿರುವ ಸರ್ಕಾರದ ನಿಯಮಗಳಿಗೆ ವಿರುದ್ಧವಾಗಿರುವುದರಿಂದ ಈ ಸಂಬಂಧ ಸರ್ಕಾರಕ್ಕೆ ಸಲ್ಲಿಸಿರುವ ದಿನಾಂಕ:29-06-2017ರ ಪ್ರಸ್ತಾವನೆಯನ್ನು ತಿರಸ್ಕರಿಸಲಾಗಿರುತ್ತದೆ.

ಸಂಖ್ಯೆ: ನಅಇ 76 ಎಂಎನ್‌ಜಿ 2021

(ಬಿ.ಎಸ್.ಯಡಿಯೂರಪ್ಪ)
ಮುಖ್ಯಮಂತ್ರಿ